ದಿನಾಂಕ 12-07-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ನಂಬ್ರ.1 ರಿಂದ 11ರ ರವರ ಪರ ಶ್ರೀ ಎಂ.ಕೆ., ವಕೀಲರಿಂದಃ

10. ನಾನು ಇಲ್ಲಿಯ ತನಕ ದಿನಾಂಕ 29-10-2015 ರಂದು ಸಹಾಯಕ ಆಯುಕ್ತರು ಮಾಡಿರುವ ಆದೇಶವನ್ನು ಪ್ರಶ್ನಿಸಿ ಅರ್ಜಿ ಸಲ್ಲಿಸಿಲ್ಲ. ಸದರಿ ಆದೇಶದ ಪ್ರಕಾರ ಪಹಣಿ ಪತ್ರಿಕೆಯಲ್ಲಿ ಎಂಟ್ರಿಯಾಗಿರುತ್ತದೆ ಎಂದರೆ ಸರಿಯಲ್ಲ. ಯಾವ ಆಧಾರದಲ್ಲಿ ಪ್ರತಿವಾದಿಯರು ತಮ್ಮ ಹೆಸರನ್ನು ಪಹಣಿ ಪತ್ರಿಕೆಯಲ್ಲಿ ದಾಖಲು ಮಾಡಿದ್ದರೆ ಎಂದು ನನಗೆ ಗೊತ್ತಿಲ್ಲ. ಈ ಬಗ್ಗೆ ನಾನು ನನ್ನ ವಾದ ಪತ್ರದಲ್ಲಿ ನಮೂದಿಸಿರುವುದಿಲ್ಲ.

11. ನನಗೆ ಸಂಕ್ರಯ್ಯ ಆಚಾರ್ಯ ಇವರ ವೈಯಕ್ತಿಕ ಪರಿಚಯ ಇತ್ತು. ನಾನು ಅವರ ಜೀವಿತ ಕಾಲದಲ್ಲಿ ಎರಡು ಬಾರಿ ಖುದ್ದು ಭೇಟಿಯಾಗಿರುತ್ತೇನೆ. ನಾನು ನಿಪಿ.14 ಮರಣ ಶಾಸನವನ್ನು ನೋಂದಾವಣೆಗೆ ಹಾಜರುಪಡಿಸುವ ಸಮಯ ಹೇಳಿಕೆ ನೀಡಿರುತ್ತೇನೆ. ಸದರಿ ಹೇಳಿಕೆಯಲ್ಲಿ ಬರೆದ ಸಂಗತಿ ನಿಜವಿರುತ್ತದೆ ಎಂದರೆ ಸರಿ. ನಾನು ಮರಣ ಶಾಸನದ ಆಧಾರದ ಮೇಲೆ ನೋಂದಾವಣೆಯಾದ ಬಳಿಕ ಭೂ ಪರಿವರ್ತನೆಗೆ ಅರ್ಜಿ ಸಲ್ಲಿಸಿರುತ್ತೇನೆ. ಈ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿರಬಹುದು. ಅಂತಹ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ನನಗೆ ನೆನಪಿಲ್ಲ.

12. ನಮ್ಮ ಒಕ್ಕೂಟ ಹಾಗೂ 12 ನೇ ಪ್ರತಿವಾದಿ ಸಂಘದವರ ಧ್ಯೆಯೋದ್ದೇಶ ಬೇರೆ ಬೇರೆ ಇರುತ್ತದೆ. ನಾವು ಬಡ ವಿದ್ಯಾರ್ಥಿಗಳಿಗೆ ಸ್ಕಾಲರ್ ಶಿಪ್ ಕೊಡುವುದು ಹಾಗೂ ಸಮಾಜ ಸೇವೆ ಮಾಡುತ್ತೇವೆ. 12 ನೇ ಪ್ರತಿವಾದಿ ಭಜನಾ ಕಾರ್ಯಕ್ರಮ ಮಾತ್ರ ಮಾಡುತ್ತಾರೆ. ನನ್ನ ಮತ್ತು 12 ನೇ ಪ್ರತಿವಾದಿ ಸಂಘದವರ ನಡುವೆ ಭಿನ್ನಾಭಿಪ್ರಾಯ ಇರುವುದಿಲ್ಲ. ಸದರಿ ಸಂಘದವರು ದಾವಾ ಆಸ್ತಿಯ ಆಸುಪಾಸಿನಲ್ಲಿ ವ್ಯವಹರಿಸುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ, ಸಂಕ್ರಯ್ಯ ಆಚಾರ್ಯ ತೀರಿ ಹೋದ ನಂತರ ಸದರಿ ಸಂಘದವರು ದಾವಾ ಆಸ್ತಿಯಲ್ಲಿ ವ್ಯವಹರಿಸುತ್ತಾರೆ ಎನ್ನುತ್ತಾರೆ. ಪ್ರಸ್ತುತ 12 ನೇ ಪ್ರತಿವಾದಿ ಸಂಘದವರು ದಾವಾ ಆಸ್ತಿಯಲ್ಲಿ ಭಜನಾ ಕಾರ್ಯಕ್ರಮ ಮಾಡುತ್ತಿದ್ದಾರೆ.

13. ಹೆರ್ಗ ಗ್ರಾಮದಲ್ಲಿ 12 ನೇ ಪ್ರತಿವಾದಿ ಸಂಘದವರಿಗೆ ಸೇರಿದ ವಿಶ್ವಕರ್ಮ ಸಮಾಜ ಸೇವಾ ಸಂಘ ಒಂದೇ ಇರುತ್ತದೆ ಎಂದರೆ ಸರಿ. ನಾನು ಸಂಕ್ರಯ್ಯ ಆಚಾರ್ಯರ ತಾಯಿಯಾದ ಗೌರಮ್ಮನವರನ್ನು ನೋಡಲು ಹೋಗಿದ್ದ ಬಗ್ಗೆ ಈಗ ನೆನಪಿಲ್ಲ. ಸದರಿಯವರಿಗೆ ನಮ್ಮ ಒಕ್ಕೂಟದ ಪರವಾಗಿ ದುಡ್ಡು ನೀಡಿದ ಬಗ್ಗೆ ನನಗೆ ನೆನಪಿಲ್ಲ. ಸದರಿ ಗೌರಮ್ಮ ಯಾವಾಗ ಮೃತಪಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಪಿ.14 ಇಲ್ಲದಿದ್ದರೆ ಪ್ರತಿವಾದಿ ನಂಬ್ರ.1 ರಿಂದ 11 ರವರಿಗೆ ವಾರೀಸುದಾರನಾತೆಯಿಂದ ದಾವ ಆಸ್ತಿ ಬರುತ್ತಿತ್ತು ಎಂದರೆ ಸಾಕ್ಷಿ, ಸದರಿಯವರು ಸಂಕ್ರಯ್ಯ ಆಚಾರ್ಯ ರ ಸಂಬಂದಿಕರಲ್ಲ ಎನ್ನುತ್ತಾರೆ. ಸದರಿ ವಾರೀಸುದಾರ ನೆಲೆಯಲ್ಲಿ ಪ್ರತಿವಾದಿ 1 ರಿಂದ 11 ರವರು ದಾವಾ ಆಸ್ತಿಯ ಸ್ವಾಧೀನತೆ ಹೊಂದಿರುತ್ತಾರೆ ಎಂದರೆ ಸರಿಯಲ್ಲ.

14. ಸಹಾಯಕ ಆಯುಕ್ತರ ಆದೇಶ 2015 ರಲ್ಲಿ ಆದ ಬಳಿಕ ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ನನಗೆ ಬೇರೆ ಕಾನೂನು ಕ್ರಮ ಕೈಗೊಳ್ಳಲು ತೊಂದರೆ ಇರಲಿಲ್ಲ. ಸಂಕ್ರಯ್ಯ ಹಾಗೂ ಅವರ ಹೆಂಡತಿ ಸಾವಿತ್ರಿ ಜೀವಂತ ಇರುವ ಸಮಯ ಪ್ರತಿವಾದಿ 1 ರಿಂದ 11 ರವರು ಅವರನ್ನು ಬಂದು ಹೋಗಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಯಾಕೆಂದರೆ ಸದರಿಯವರು ಮರಣ ಹೊಂದುವ ಸಮಯ ಕೂಡ ಸದರಿ ಪ್ರತಿವಾದಿಯರು ಬಂದಿರುವುದಿಲ್ಲ. ಸಂಕ್ರಯ್ಯ ಮತ್ತು ಸಾವಿತ್ರಿಯವರ ಅಂತ್ಯ ಸಂಸ್ಕಾರವನ್ನು ಪ್ರತಿವಾದಿ ನಂಬ್ರ.1 ರಿಂದ 11 ರವರು ನಡೆಸಿರುತ್ತಾರೆ ಎಂದರೆ ಸರಿಯಲ್ಲ. ಸಂಕ್ರಯ್ಯ ಮತ್ತು ಸಾವಿತ್ರಿಯವರ ಸಂಬಂದ ಚೆನ್ನಾಗಿರದ ಕಾರಣ ಪ್ರತ್ಯೇಕವಾಗಿ ವಾಸವಿದ್ದರು ಎಂದರೆ ಸರಿಯಲ್ಲ. ನಿಪಿ.14 ರಂತೆ ಸಂಕ್ರಯ್ಯನವರು ಮರಣ ಶಾಸನ ಬರೆದಿಟ್ಟಿಲ್ಲ ಎಂದರೆ ಸರಿಯಲ್ಲ. ಹಾಗೇನಾದರೂ ಮರಣ ಶಾಸನ ಬರೆದಿಟ್ಟಿದ್ದರೆ ಅವರೇ ನೋಂದಾಯಿಸುತ್ತಿದ್ದರು ಎಂದರೆ ಸರಿಯಲ್ಲ.

15. ನಿಪಿ.4 ನಡಾವಳಿ ಹಾಗೂ ನಿಪಿ.14 ಮರಣ ಶಾಸನದಲ್ಲಿನ ಕೈ ಬರಹಗಳಿಗೆ ಸಾಮ್ಯತೆ ಇದೆ ಎಂದರೆ ಸರಿಯಲ್ಲ. ನಿಪಿ.4 ನಡಾವಳಿಯನ್ನು ನಮ್ಮ ಒಕ್ಕೂಟದ ಕಾರ್ಯದರ್ಶಿ ಮುರಳೀಧರ ಬರೆದಿರಬಹುದು. ಪ್ರತಿವಾದಿ ನಂಬ್ರ.12 ಸಂಘದವರೇ ಸಂಕ್ರಯ್ಯ ಹಾಗೂ ಸಾವಿತ್ರಿಯವರನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನನಗೆ ಹೆರ್ಗ ಗ್ರಾಮದ ನರ್ಸ್ ಅರುಣ ರವರ ಪರಿಚಯ ಇಲ್ಲ. ಸದರಿ ಅರುಣರವರೇ ಸಂಕ್ರಯ್ಯನವರ ಅನಾರೋಗ್ಯದ ಸಮಯದಲ್ಲಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸಂಕ್ರಯ್ಯನವರ ಮರಣಾನಂತರ

ಪ್ರತಿವಾದಿ ನಂಬ್ರ.1 ರಿಂದ 11 ರವರು ದಾವಾ ಆಸ್ತಿಯನ್ನು ಅಭಿವೃದ್ಧಿ ಪಡಿಸಿರುತ್ತಾರೆ ಎಂದರೆ ಸರಿಯಲ್ಲ.

16. ನಾನು ಕೊನೆಯ ಬಾರಿ ಭೇಟಿ ನೀಡಿದ ಸಂದರ್ಭದಲ್ಲಿ ಮನೆ ಹೊರತು ಬೇರೆ ಯಾವುದೇ ಅಭಿವೃದ್ಧಿ ಆಗಿಲ್ಲ. ಸಾಕ್ಷಿದಾರರಿಗೆ ಈಗ ದಾವಾ ಆಸ್ತಿಗೆ ಸಂಬಂಧಿಸಿದ 02 ಫೊಟೋಗಳನ್ನು ತೋರಿಸಲಾಗಿ, ಸದರಿ ಶೀಟುಗಳನ್ನು ಹಾಕಿರುವುದು ನನ್ನ ಗಮನದಲ್ಲಿ ಇಲ್ಲ ಎಂದು ಹೇಳಿದ್ದು, ಆ ಕಾರಣ ಸದರಿ ಫೊಟೋಗಳನ್ನು ನಿಶಾನೆಗೊಳಪಡಿಸಲಾಗಿರುವುದಿಲ್ಲ ಹಾಗೂ ಪ್ರತಿವಾದಿ ಪರ ವಕೀಲರಿಗೆ ಮರಳಿಸಲಾಗಿರುತ್ತದೆ. ನಿಪಿ.12 ಮತ್ತು 13 ಕಾನೂನು ಬದ್ಧ ದಾಖಲೆಗಳು ಅಂದರೆ ಸರಿಯಲ್ಲ. ನಿಪಿ.13 ಡಿಕ್ರಿ ಪ್ರಕಾರ ಪ್ರತಿವಾದಿಯರು ದಾವಾ ಆಸ್ತಿಯ ಹಕ್ಕು ಸ್ವಾಮ್ಯತೆ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರೇ ಸಂಕ್ರಯ್ಯ ಆಚಾರ್ಯರನ್ನು ನೋಡಿಕೊಳ್ಳುತ್ತಿದ್ದ ಕಾರಣ ದಾವಾ ಆಸ್ತಿ ಅವರಿಗೇ ಸಲ್ಲಬೇಕು ಎಂದು ಇಚ್ಚೆ ಹೊಂದಿದ್ದರು ಎಂದರೆ ಸರಿಯಲ್ಲ.

17. ಅಲೆವೂರು ಪ್ರಭಾಕರ ಆಚಾರ್ಯ ನನ್ನ ಅಣ್ಣ. ಅವರು ದಿನಾಂಕ 17-05-2001 ರಂದು ಮೃತಪಟ್ಟಿರುತ್ತಾರೆ. ನಿಪಿ.14 ನ್ನು ಹಳೇಯ ದಾಖಲೆ ಎಂದು ತೋರಿಸಲು ರಸ್ಸೆ ಪೇಪರನ್ನು ಲಗತ್ತಿಸಿರುತ್ತೇವೆ ಎಂದರೆ ಸರಿಯಲ್ಲ. ನಿಪಿ.14 ಸೃಷ್ಟಿಸಿದ ದಾಖಲೆಯಾದ ಕಾರಣ ವಾದಿ ಒಕ್ಕೂಟಕ್ಕೆ ಹಕ್ಕು ಬರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ದಾವೆಯನ್ನು ದಾಖಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

12 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಪ್ರ.ಹಿ.ಸಿ.ನ್ಯಾ ಉಡುಪಿ.